ತಿಮ್ಮ: ಟೈ ಬೆಲೆ ಎಷ್ಟು?

ಗುಂಡ: ಐದು ನೂರು ರೂಪಾಯಿ

ತಿಮ್ಮ: ಅಷ್ಟು ಹಣದಲ್ಲಿ ಒಳ್ಳೆಯ ಶೂ ಬರುತ್ತವೆಯಲ್ಲ.

ಗುಂಡ: ಹಾಗಾದರೆ ಅವುಗಳನ್ನೇ ಕಟ್ಟಿಕೊಳ್ಳಿ.

***

ಬ್ರಿಟಿಷ್: ನಿನಗೆ ಈಜಲು ಬರುತ್ತಾ?

ಭಾರತೀಯ: ಇಲ್ಲ.

ಬ್ರಿಟಿಷ್: ನನ್ನ ಮನೆಯ ನಾಯಿ ಕೂಡಾ ಈಜುತ್ತೆ.

ಭಾರತೀಯ: ನಿನಗೆ ಈಜಲು ಬರುತ್ತಾ?

ಬ್ರಿಟಿಷ್: ಬರುತ್ತೆ.

ಭಾರತೀಯ: ಹಾಗಿದ್ದರೆ ನಾಯಿಗೂ ನಿನಗೂ ಏನು ವ್ಯತ್ಯಾಸ?

***

ಹುಡುಗ: ಹಲೋ ಎಲ್ಲಿದ್ದೀಯಾ?

ಹುಡುಗಿ: ನಾನಾ? ಹೋಟೆಲ್ ತಾಜ್‌ನ ಎಸಿ ರೂಮ್‌ನಲ್ಲಿ ಕುಳಿತುಕೊಂಡು ಒಂದು ಬರ್ಗರ್‌ಗೆ ಆರ್ಡರ್ ಮಾಡಿ ಕುಳಿತುಕೊಂಡಿದ್ದೀನಿ. ನೀನು ಎಲ್ಲಿದ್ದಿಯಾ?

ಹುಡುಗ: ನಾನು ಬಸವೇಶ್ವರ ಖಾನಾವಳಿಯಲ್ಲಿ ಊಟ ಮಾಡುತಿದ್ದೀನಿ. ಮೆತ್ತನೆ ರೊಟ್ಟಿ ಡೊಣ್ಣೆ ಮೆಣಸಿನಕಾಯಿ ಪಲ್ಲೆ. ಅಂದಹಾಗೆ ಪಲ್ಲೆ ಜಾಸ್ತಿ ಹಾಕಿಸಿಕೊಳ್ಳಬೇಡ. ತುಂಬಾ ಖಾರ ಇದೆ. ಹೊಟ್ಟೆ ನೋವು ಬರಬಹುದು. ನಿನ್ನ ಕಾಳಜಿ ಮಾಡೋದು ನನ್ನ ಕರ್ತವ್ಯ ಅಲ್ಲಾ? ನಾನು ನಿನ್ನ ಎರಡು ಹಿಂದಿನ ಸೀಟಿನಲ್ಲಿಯೇ ಕುಳಿತುಕೊಂಡಿದ್ದೀನಿ.

***

ಅಮೇರಿಕ ಮಗಳು: ಸಾರಿ ಪಪ್ಪಾ, ನಾನು ನಿನ್ನೆ ಮದುವೆ ಮಾಡಿಕೊಂಡೆ. ಅವಸರದಲ್ಲಿ ನಿಮಗೆ ತಿಳಿಸಲಿಕ್ಕೆ ಆಗಲಿಲ್ಲ.

ಅಪ್ಪ: ಸರಿ, ಆದದ್ದು ಆಗಿ ಹೋಯಿತು. ಮುಂದಿನ ಸಾರಿ ಈ ರೀತಿ ಮಾಡಬೇಡ. ತಪ್ಪದೇ ಕರಿಬೇಕು ಆಯಿತಾ?

***

ತಿಮ್ಮ: ಏನಾಯ್ತು?

ಗುಂಡ: ಎಲ್ಲ ತಾಯಂದಿರು ತಮ್ಮ ಮಗಳಿಗೆ ಒಳ್ಳೆಯ ಹುಡುಗ ಸಿಗಬೇಕು ಅಂತ ಕನಸು ಕಾಣ್ತಾರೆ.

ತಿಮ್ಮ: ಅದಕ್ಕೆ?

ಗುಂಡ: ಆದರೆ ನನ್ನೊಬ್ಬನಿಂದಲೇ ಎಷ್ಟು ತಾಯಂದಿರ ಕನಸು ಈಡೇರಿಸುವದಕ್ಕೆ ಸಾಧ್ಯ ಹೇಳು.

***

ಒಂದು ದಿನ ಬಾಸ್ ಆಫೀಸಿಗೆ ಬೇಗ ಬಂದರು. ಅವರ ಆಫೀಸಿನ ಮ್ಯಾನೇಜರ್ ಸ್ಟೆನೋಗೆ ಮುತ್ತಿಡುತಿದ್ದುದನ್ನು ನೋಡಿ 'ಇದಕ್ಕೇ ಏನ್ರೀ ನಾನು ನಿಮಗೆ ಸಂಬಳ ಕೊಡೋದು' ಎಂದು ಗದರಿದರು. 'ಇಲ್ಲ ಸರ್, ನಾನು ಇದಕ್ಕೆ ದುಡ್ಡು ತಗೊಳ್ಳಲ್ಲ' ಎಂದ ಮ್ಯಾನೇಜರ್ ನಾಚಿಕೆಯಿಂದ.

(ಸಂಗ್ರಹ) ಭೋಜರಾಜ ಸೊಪ್ಪಿಮಠ



ಗಣೇಶ್

ಕುಡುಕನೊಬ್ಬ ಚೆನ್ನಾಗಿ ಕುಡಿದು ಮೋರಿಯಲ್ಲಿ ಬಿದ್ದಿದ್ದ. ಆಗ ಜೋರಾಗಿ ಮಳೆ, ಮಿಂಚು ಶುರುವಾಯ್ತು. ಇದನ್ನು ನೋಡಿದ ಇನ್ನೊಬ್ಬ ಕುಡುಕ 'ಓ ದೇವರೆ, ಏನಪ್ಪಾ ನಿನ್ನ ಲೀಲೆ. ಮೋರಿಯಲ್ಲಿ ಬೀಳಿಸೋನೂ ನೀನೇ... ಫೋಟೊ ತೆಗೆಯೋನೂ ನೀನೇ' ಎಂದು ಗೊಣಗುತ್ತಾ ಹೋದ.

ಗುಂಡ: ರಂಗ ನೀನು ಓಟದ ಸ್ಪರ್ಧೆಯಲ್ಲಿ ಯಾವಾಗಲೂ ಪ್ರಥಮ , ಇದರ ಗುಟ್ಟೇನು?

ರಂಗ: ಓಡುವಾಗ ನನ್ನ ಹೆಂಡತಿ ನೆನಪು ಮಾಡಿಕೊಳ್ಳುತ್ತೇನೆ.

***

ಕೇಶವ: ಗುಂಡ ನೀನು ಜೀವನದಲ್ಲಿ ಏನಾಗಬೇಕೆಂದು ಆಸೆ?

ಗುಂಡ: ರಾಜಕಾರಣಿಯಾಗಿ ಬಡಜನರ ಸೇವೆ ಮಾಡಬೇಕೆಂದು ಆಸೆ. ಹಾಗಾದರೆ ನಿನ್ನ ಆಸೆಯೇನು?

ಕೇಶವ: ನಾನು ಡಾಕ್ಟರ್ ಆಗಿ ಬಡಜನರ ಸೇವೆ ಮಾಡಬೇಕೆಂದು ಆಸೆ. ರಾಜು ನಿನ್ನಾಸೆ?

ರಾಜು: ನಾನು ಯಾವುದಾದರೂ ದೊಡ್ಡ ಅಧಿಕಾರಿಯಾಗಿ ಬಡಜನರ ಸೇವೆ ಮಾಡಬೇಕೆಂದು ಆಸೆ. ನಮ್ಮಾಸೆಯೇನೋ ಸರಿ, ಕಿಟ್ಟು ನಿನ್ನಾಸೆಯೇನು?

ಕಿಟ್ಟು: ನೀವೆಲ್ಲ ಬಡಜನರ ಸೇವೆ ಮಾಡಲು ಟೊಂಕ ಕಟ್ಟಿರುವಾಗ ನಾನು ಬಡವನಾಗಿಯೇ ಇರಬೇಕೆಂಬ ಆಸೆ!

***

ವ್ಯಕ್ತಿ: ಡಾಕ್ಟ್ರೇ ನೀವು ಮದ್ಯ ಬಿಡಿಸುತ್ತೇವೆ ಎಂದು ಬೋರ್ಡ್ ಹಾಕಿದ್ದೀರಲ್ಲ ಮದ್ಯ ಬಿಡಿಸಿಕೊಡುತ್ತೀರಾ?

ಡಾಕ್ಟರ್: ಖಂಡಿತ ಬಿಡಿಸಿ ಕೊಡುತ್ತೇನೆ.

ವ್ಯಕ್ತಿ: ಹಾಗಾದರೆ ಪೊಲೀಸರು ನನ್ನ ಹತ್ತಿರ ಇದ್ದ ಮೂರು ಬಾಟಲ್ ಕಿತ್ತುಕೊಂಡು ಹೋಗಿದ್ದಾರೆ ಬಿಡಿಸಿಕೊಡಿ!

***

ಓದುಗ: ನಿಮ್ಮ 'ಕಾಣೆಯಾದವಳು' ಕಾದಂಬರಿ ಬಹಳ ಚೆನ್ನಾಗಿದೆ. ಆದರೆ ನಾಯಕಿಯನ್ನು ನಾಪತ್ತೆ ಮಾಡಬಾರದಿತ್ತು.

ಲೇಖಕ: ಅದು ಅನಿವಾರ್ಯವಾಗಿತ್ತು.

ಓದುಗ: ಏಕೆ ಅನಿವಾರ್ಯವಾಗಿತ್ತು?

ಲೇಖಕ: ಈ ಕಾದಂಬರಿ ಮುಗಿಸುವ ವೇಳೆಗೆ ನನ್ನ ಹೆಂಡತಿಯೇ ನಾಪತ್ತೆಯಾಗಿದ್ದಳು!

***

ವಕೀಲ: ನಿನ್ನ ಕೇಸ್ ತೆಗೆದುಕೊಳ್ಳುತ್ತೇನೆ. ನನ್ನ ಫೀ ತುಂಬ ಜಾಸ್ತಿ.

ರಂಗ: ಈಗ ಅಷ್ಟು ಹಣ ಕೊಡುವುದಕ್ಕೆ ಆಗುವುದಿಲ್ಲ ಸಾರ್.

ವಕೀಲ: ನಿನ್ನ ಕಾರಿದೆಯಲ್ಲ ಅದನ್ನು ಮಾರಾಟ ಮಾಡು.

ರಂಗ: ನನ್ನ ಮೇಲಿರುವ ಕೇಸು ಈ ಕಾರಿನದೇ ಸಾರ್!

***

ಕಿಟ್ಟು: ಕವಿತಾ, ನಾನೊಂದು ಪ್ರೇಮ ಕವನ ಬರೆದು ಕೊಟ್ಟಿದ್ದೆನಲ್ಲ ಅದಕ್ಕೆ ಏನೂ ಪ್ರತಿಕ್ರಿಯೆ ಬರಲಿಲ್ಲ?

ಕವಿತಾ: ಇಷ್ಟರಲ್ಲಿಯೇ ನಮ್ಮ ತಂದೆಯಿಂದ ಪ್ರತಿಕ್ರಿಯೆ ಬರುತ್ತದೆ!

(ಸಂಗ್ರಹ) ಶಂಕರೇಗೌಡ ತುಂಬಕೆರೆ

ಶಿಕ್ಷಕರು: ಮಿದುಳಿನ ವಿಶೇಷ ಏನು?

ವಿದ್ಯಾರ್ಥಿ: ಇದು ದಿನದ 24 ತಾಸೂ ಕೆಲಸ ಮಾಡುತ್ತದೆ. ಆದರೆ, ಪರೀಕ್ಷೆ ಸಮಯದಲ್ಲಿ ಕೈಕೊಡುತ್ತದೆ.

***

ಬಸ್ಯಾ: ವಿದ್ಯುತ್ ಇಲ್ಲದಿದ್ದರೆ ಏನಾಗುತ್ತದೆ?

ಕೋಲ್ಯಾ: ಇನ್ನೇನು ಮಾಡಲಿಕ್ಕಾಗುತ್ತದೆ. ರಾತ್ರಿ ಕ್ಯಾಂಡಲ್ ಹಚ್ಚಿಕೊಂಡು ಟಿ.ವಿ. ನೋಡಬೇಕು.

***

ಬೆಲೆ ಏರಿಕೆ ಒಂದು ರೋಗವಾಗಿದೆ. ನಾವು ಅದರಿಂದ ರಕ್ಷಣೆ ಪಡೆಯಬೇಕು. ದಯವಿಟ್ಟು ಕಡಿಮೆ ಊಟಮಾಡಿ ಆದಷ್ಟು ಹಳೇ ಬಟ್ಟೆಗಳನ್ನೇ ಧರಿಸಿ, ಸಾಧ್ಯವಾದಷ್ಟು ನಡೆದುಕೊಂಡೇ ಹೋಗಿ ಇಂಧನ ಖರ್ಚನ್ನು ಉಳಿಸಿ, ಗಮನವಿರಲಿ ದುಬಾರಿ ವಸ್ತುಗಳ ವಿರುದ್ಧ ನಾವು ಹೋರಾಡಬೇಕೇ ವಿನಃ ಸರ್ಕಾರದ ವಿರುದ್ಧ ಅಲ್ಲ.

***

ಡಾಕ್ಟರ್: ನಮ್ಮ ಪ್ರಯತ್ನ ನಾವು ಮಾಡಿದ್ದೇವೆ. ಮುಂದಿನದನ್ನು ದೇವರು ನೋಡಿಕೊಳ್ಳುತ್ತಾನೆ.

ರೋಗಿ: ಹಾಗಿದ್ದರೆ ತಮ್ಮ ಶುಲ್ಕವನ್ನೂ ದೇವರು ನೋಡಿಕೊಳ್ಳುತ್ತಾರೆ.

ಸಂಗ್ರಹ : ರಮಾನಂದ ಶರ್ಮಾ